# PRESS MEET

# "ONE DAY NATIONAL CONFERENCE ON ECONOMIC POLICIES AND NATURAL DISASTERS IN INDIA"

## 01-10-2019












## ಮೈಸೂರಿನ ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜಿನಲ್ಲಿ "ಭಾರತದಲ್ಲಿ ಆರ್ಥಿಕ ನಿಯಮಗಳು ಹಾಗೂ ನೈಸರ್ಗಿಕ ವಿಪತ್ತುಗಳು" ಎಂಬ ವಿಷಯದ ರಾಷ್ಟ್ರಮಟ್ಟದ ವಿಚಾರ ಸಂಕಿರಣ

**ನಗರದ ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜಿನಲ್ಲಿ ದಿನಾಂಕ:೦೪.೧೦.೨೦೧೯ರಂದು ಬೆಳಿಗ್ಗೆ ೯.೩೦ ಗಂಟೆಗೆ "ಎಕನಾಮಿಕ್ ಪಾಲಿಸಿಸ್ ಅಂಡ್ ನ್ಯಾಚುರಲ್ ಡಿಸಾಸ್ಟರ್ಸ್ ಇನ್ ಇಂಡಿಯಾ" ಎಂಬ ವಿಷಯದ ಕುರಿತು ಒಂದು ದಿನದ ರಾಷ್ಟ್ರ ಮಟ್ಟದ ವಿಚಾರ ಸಂಕಿರಣವನ್ನು ಹಮ್ಮಿಕೊಳ್ಳಲಾಗಿದೆ. ವಿಶ್ವದ ಹೆಚ್ಚು ವಿಪತ್ತು ಪೀಡಿತ ದೇಶಗಳಲ್ಲಿ ಭಾರತವು ಒಂದಾಗುವ ಲಕ್ಷಣಗಳು ಗೋಚರಿಸುತ್ತಿದೆ. ಅದಕ್ಕೆ ರಾಷ್ಟ್ರದ ಉನ್ನತ ಮಟ್ಟದ ಸಾಮಾಜಿಕ ಮತ್ತು ಆರ್ಥಿಕ ನೀತಿಗಳ ಜೊತೆಗೆ ಭೌಗೋಳಿಕ ಪರಿಸ್ಥಿತಿಗಳು ಕಾರಣವಾಗಿವೆ. ತೀವ್ರವಾದ ಮಾನವ ಸಂಪನ್ಮೂಲ, ವಸ್ತುಗಳ ಮತ್ತು ಪರಿಸರದ ನಷ್ಟದಿಂದಾಗಿ ಸುಸ್ಥಿರ ಸಮಾಜದ ಮೇಲೆ ದುಷ್ಪರಿಣಾಮ ಬೀರುತ್ತಿದೆ. ಇದರಿಂದಾಗಿ ಉತ್ತಮ ಪರಿಸರ ಮಾನವನ ಕೈಮೀರಿ ಹೋಗುತ್ತಿರುವುದಂತು ಸತ್ಯ. ಆಕ್ರಮಣಕಾರಿ ಅಭಿವೃದ್ಧಿಶೀಲ ಪರಿಕಲ್ಪನೆಗಳಿಗೆ ಸಂಬಂಧಿಸಿದ ಆರ್ಥಿಕ ನೀತಿಗಳು ದೇಶದ ಪ್ರಾಕೃತಿಕ ವಿಪತ್ತುಗಳಿಗೆ ಕಾರಣವಾಗಿದ್ದು, ಭಾರತದಂತಹ ಅಭಿವೃದ್ಧಿ ಹೊಂದುತ್ತಿರುವ ದೇಶದ ಆರ್ಥಿಕತೆಯ ಮೇಲೆ ನೈಸರ್ಗಿಕ ವಿಪತ್ತು ಬಲವಾದ ಪೆಟ್ಟು ನೀಡುತ್ತಿವೆ.**

**ನೈಸರ್ಗಿಕ ವಿಪತ್ತಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ಗಂಭೀರವಾದ ಚಿಂತನೆಗಳು ನಡೆಯದಿರುವುದು ಅತ್ಯಂತ ವಿಷಾದಕರ ಸಂಗತಿಯಾಗಿದೆ. ವಿಪತ್ತು ನಿರ್ವಹಣೆಗಾಗಿ ಕೇಂದ್ರ ಹಣಕಾಸು ಸಚಿವಾಲಯದಿಂದ ಆರ್ಥಿಕ ನೆರವನ್ನು ಮೀಸಲಿಟ್ಟಿರುತ್ತಾರೆ, ಹದಿಮೂರನೆ ಹಣಕಾಸು ಆಯೋಗದ ಶಿಫಾರಸ್ಸಿನಂತೆ ಕಾರ್ಯನಿರ್ವಹಿಸುತ್ತಿರುವ ಖಆಖಈ & ಓಆಖಈ ಅವರು ನೀಡುವ ವರದಿಯನ್ನು ಆಧರಿಸಿ ರಾಜ್ಯ ಸರ್ಕಾರಗಳಿಗೆ ಕೇಂದ್ರ ಹಣಕಾಸು ಸಚಿವಾಲಯವು ಗೃಹ ಸಚಿವಾಲಯದ ಮುಖೇನ ವಿಪತ್ತು ಪರಿಹಾರ ನಿಧಿಯನ್ನು ರಾಜ್ಯ ಸರ್ಕಾರಗಳಿಗೆ ಬಿಡುಗಡೆಗೊಳಿಸುತ್ತದೆ. ಆದಾಗ್ಯೂ ಈ ರೀತಿಯ ನೈಸರ್ಗಿಕ ವಿಪತ್ತುಗಳಿಗೆ ಸಂಬಂಧಿಸಿದಂತೆ ಕೇಂದ್ರ ಸರ್ಕಾರಕ್ಕಿಂತ ರಾಜ್ಯ ಸರ್ಕಾರದ ಹೊಣೆಗಾರಿಕೆ ಹೆಚ್ಚಿನದಾಗಿರುತ್ತದೆ. ೧೯೯೭-೯೮ರ ನಂತರ ಹೆಚ್ಚಿನ ರಾಜ್ಯಗಳು ತೀವ್ರ ಹಣಕಾಸಿನ ಬಿಕ್ಕಟ್ಟನ್ನು ಎದುರಿಸುತ್ತಿರುವ ಹೊರತಾಗಿಯೂ ಆರ್ಥಿಕ ಉದಾರೀಕರಣದ ಫಲದಿಂದಾಗಿ ಕೇಂದ್ರ ಸರ್ಕಾರದ ವಿವೇಚನ ಅಧಿಕಾರದಿಂದ ಸಂಪನ್ಮೂಲ ಕ್ರೂಢೀಕರಣ ಹೆಚ್ಚಳವಾಗಿದೆ. ಈ ಎಲ್ಲಾ ಕಾರಣಗಳಿಂದಾಗಿ ವಿಪತ್ತು ನಿರ್ವಹಣೆ ಪರಿಣಾಮಕಾರಿಯಾಗಿ ನಡೆಯಲು ಒಂದು ಸಮಗ್ರ ನೀತಿಯ ಅವಶ್ಯಕತೆಯಿದೆ. ನೈಸರ್ಗಿಕ ವಿಪತ್ತುಗಳ ತೀವ್ರತೆ, ಪರಿಣಾಮ, ಪರಿಹಾರ ಕ್ರಮ ಮತ್ತು ಇದಕ್ಕೆ ಸಂಬಂಧಿಸಿದಂತೆ ಸರ್ಕಾರದ ನೀತಿ ನಿಯಮಗಳನ್ನು ಅರ್ಥೈಸಿಕೊಳ್ಳುವ ಬಗ್ಗೆ ಚರ್ಚಿಸುವ ದೃಷ್ಟಿಯಿಂದ ವಿಚಾರ ಸಂಕಿರಣ ಏರ್ಪಡಿಸಲಾಗಿದೆ.**

ವಿಚಾರ ಸಂಕಿರಣ ಈ ಕೆಳಕಂಡ ಉದ್ದೇಶಗಳನ್ನು ಹೊಂದಿರುತ್ತದೆ

**೧. ಆರ್ಥಿಕ ನೀತಿ, ಸರ್ಕಾರ ಯೋಜನೆಗಳಿಂದ ಮುಂದುವರೆದ ನೈಸರ್ಗಿಕ ಸಂಪತ್ತುಗಳ ಮೇಲಾಗುವ ಪರಿಣಾಮಗಳು.**

**೨. ನೈಸರ್ಗಿಕ ವಿಪತ್ತುಗಳ ನಿರ್ವಹಣೆಯಲ್ಲಿ ಭಾರತ ಸರ್ಕಾರದ ಪರಿಹಾರ ನಿಧಿಯೋಜನೆಗಳ ಬಗ್ಗೆ ವಿಶ್ಲೇಷಣೆ.**

**೩. ಪೂರ್ವ ಮತ್ತು ಘಟನೋತ್ತರ ವಿಪತ್ತುಗಳಿಂದ ಸಾರ್ವಜನಿಕರು ಎದುರಿಸುವ ಸವಾಲುಗಳನ್ನು ಚರ್ಚಿಸುವುದು.**

**೪. ಭಾರತದಲ್ಲಿ ವಿಪತ್ತುಗಳನ್ನು ನಿರ್ವಹಿಸುವ ಬಗ್ಗೆ ಆಗಿರುವ ತಯಾರಿಗಳ ಪ್ರಾಮುಖ್ಯತೆಯನ್ನು ವಿಶ್ಲೇಷಿಸುವುದು.**

**೫. ವಿಪತ್ತು ನಿರ್ವಹಣೆಯನ್ನು ಅರ್ಥೈಸಿಕೊಳ್ಳುವ ಬಗ್ಗೆ ಚರ್ಚಿಸಲು ಅಧ್ಯಾಪಕರು, ನೈರ್ಗಿಕ ತಜ್ಞರು ಮತ್ತು ಸಾಮಾಜಿಕ ಅಧಿಕಾರಿಗಳಿಗೆ ವೇದಿಕೆಯನ್ನು ಏರ್ಪಡಿಸುವುದು.**

ವಿಚಾರ ಸಂಕಿರಣವು ಈ ಕೆಳಕಂಡ ಉಪವಿಷಯಗಳನ್ನು ಒಳಗೊಂಡಿರುತ್ತದೆ

- **ನೈಸರ್ಗಿಕ ವಿಪತ್ತುಗಳ ವಿಧಗಳು ಮತ್ತು ಪ್ರಮಾಣ**
- **ನೈಸರ್ಗಿಕ ವಿಪತ್ತು ನಿರ್ವಹಣೆಯಲ್ಲಿ ಸರ್ಕಾರದ ಯೋಜನೆಗಳು**
- **ಹವಾಮಾನ ಮುನ್ನಂದಾಜು ಮತ್ತು ಪ್ರಸ್ತುತ ವಾತಾವರಣ**
- **ನೈಸರ್ಗಿಕ ಸಂಪನ್ಮೂಲ ನಿರ್ವಹಣೆಯ ನೀತಿಗಳು**
- **ನೈಸರ್ಗಿಕ ವಿಪತ್ತು ನಿರ್ವಹಣೆಯ ಕಾರ್ಯವಿಧಾನ**

- ಪರಿಸರ ವ್ಯೂಹ ಬದಲಾವಣೆಗೆ ಸಂಬಂಧೀಸಿದ ನೀತಿ ರೂಪರೇಷೆಗಳು
- ನೈಸರ್ಗಿಕ ವಿಪತ್ತು ನಿರ್ವಹಣೆಯಲ್ಲಿ ಆಧುನಿಕ ತಂತ್ರಗಾರಿಕೆಯನ್ನು ಅಳವಡಿಸುವುದು
- ವಿಪತ್ತು ನಿರ್ವಹಣೆಯಲ್ಲಿ ಭಾರತದ ಆರ್ಥಿಕ ಸ್ಥಾನಮಾನ

ವಿಚಾರ ಸಂಕಿರಣದ ಉದ್ಘಾಟನೆಯನ್ನು ಅಂದು ಬೆಳಿಗ್ಗೆ ೯.೩೦ ಗಂಟೆಗೆ ಮೈಸೂರು ವಿಶ್ವವಿದ್ಯಾನಿಲಯದ ಕುಲಪತಿಗಳಾದ ಪ್ರೊ.ಜಿ.ಹೇಮಂತ ಕುಮಾರ್ ಅವರು ನೆರವೇರಿಸುವರು ಹಾಗೂ ಮೈಸೂರು ವಿಶ್ವವಿದ್ಯಾನಿಲಯದ ಭೂವಿಜ್ಞಾನ ವಿಭಾಗದ ವಿಶ್ರಾಂತ ಪ್ರಾಧ್ಯಾಪಕರಾದ ಪ್ರೊ.ಎ.ಬಾಲಸುಬ್ರಮಣಿಯನ್ ಅವರು ದಿಕ್ಸೂಚಿ ಭಾಷಣ ಮಾಡುವರು. ಸಂಸ್ಥೆಯ ಗೌ॥ಅಧ್ಯಕ್ಷರಾದ ಶ್ರೀಗುಂಡಪ್ಪಗೌಡರವರು ಅಧ್ಯಕ್ಷತೆ ವಹಿಸುವರು. ಗೌ॥ಕಾರ್ಯದರ್ಶಿಯವರಾದ ಶ್ರೀ.ಪಿ.ವಿಶ್ವನಾಥ್, ಕೋಶಾಧ್ಯಕ್ಷರಾದ ಶ್ರೀ.ಶ್ರೀಶೈಲರಾಮಣ್ಣವರ್ ಅವರು ಮುಖ್ಯ ಅತಿಥಿಗಳಾಗಿ ಆಗಮಿಸುವರು.

ಉದ್ಘಾಟನೆಯ ನಂತರ ಮೊದಲ ವಿಚಾರಗೋಷ್ಠಿಯು "ಭಾರತದ ಆರ್ಥಿಕತೆಯ ಮೇಲೆ ಪ್ರಾಕೃತಿಕ ವಿಪತ್ತುಗಳ ಪ್ರಭಾವ" ಎಂಬ ವಿಷಯದ ಬಗ್ಗೆ ಜರುಗಲಿದ್ದು ಇದರ ಸಂಪನ್ಮೂಲ ವ್ಯಕ್ತಿಗಳಾಗಿ ಬೆಂಗಳೂರು ವಿಶ್ವವಿದ್ಯಾನಿಲಯದ ಅರ್ಥಶಾಸ್ತ್ರ ಅಧ್ಯಯನ ವಿಭಾಗದ ಪ್ರಾಧ್ಯಾಪಕರಾದ ಪ್ರೊ.ಎಸ್.ಆರ್.ಕೇಶವ ಅವರು ಆಗಮಿಸುವರು ಹಾಗೂ ಅಧ್ಯಕ್ಷತೆಯನ್ನು ಮೈಸೂರು ವಿಶ್ವವಿದ್ಯಾನಿಲಯದ ಯುಜಿಸಿ–ಹೆಚ್‌ಆರ್‌ಡಿಸಿ ವಿಭಾಗದ ನಿರ್ದೇಶಕರಾದ ಡಾ. ಮಿಡತಲರಾಣಿ ಅವರು ವಹಿಸುವರು ಮತ್ತು ಗೋಷ್ಠಿ ವರದಿಗಾರರಾಗಿ ಬನ್ನೂರು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ರಾಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಡಾ॥ಕೃಷ್ಣ ರಾಜೇಂದ್ರ ಭರತ್‌ರ್‌ವರು ಭಾಗವಹಿಸುವರು.

"ವಿಪತ್ತು ನಿರ್ವಹಣೆ ಅಧ್ಯಯನದಲ್ಲಿ ಭೌಗೋಳಿಕ ಮಾಹಿತಿ ತಂತ್ರಜ್ಞಾನದ ಬಳಕೆ" ಎಂಬ ವಿಷಯದ ಬಗ್ಗೆ ೨ನೇ ವಿಚಾರ ಗೋಷ್ಠಿ ಜರುಗಲಿದ್ದು ಇದರ ಅಧ್ಯಕ್ಷತೆಯನ್ನು ತಮಿಳುನಾಡಿನ ತಿರುಚ್ಚಿಯ ಭಾರತೀದಾಸನ್ ವಿಶ್ವವಿದ್ಯಾನಿಲಯದ ಭೂಗೋಳಶಾಸ್ತ್ರ ವಿಭಾಗದ ವಿಶ್ರಾಂತ ಪ್ರಾಧ್ಯಾಪಕರಾದ ಪ್ರೊ॥ಕೆ.ಕುಮಾರಸ್ವಾಮಿಯವರು ವಹಿಸುವರು. ಸಂಪನ್ಮೂಲ ವ್ಯಕ್ತಿಗಳಾಗಿ ಉತ್ತರ ಪ್ರದೇಶದ ನೋಯ್ಡಾದ ಆರ್.ಎಂ.ಎಸ್ ರಿಸ್ಕ್ ಮ್ಯಾನೇಜ್‌ಮೆಂಟ್ ಸಲ್ಯೂಷನ್ಸ್‌ನ ಸೀನಿಯರ್ ಮ್ಯಾನೇಜರ್ ಆದ ಶ್ರೀ.ಆರ್.ಅಜಿತ್ ಕುಮಾರ್‌ರವರು ಮತ್ತು ಗೋಷ್ಠಿ ವರದಿಗಾರರಾಗಿ ಮಂಡ್ಯದ ಪಿ.ಇ.ಎಸ್ ಕಾಲೇಜಿನ ರಾಜ್ಯಶಾಸ್ತ್ರ ಪ್ರಾಧ್ಯಾಪಕರಾದ ಪ್ರೊ.ಶಿವಕುಮಾರ್.ಎಂ ಅವರು ಭಾಗವಹಿಸುವರು.

ಭೋಜನ ವಿರಾಮದ ನಂತರ ಜರುಗುವ ಸಮಗ್ರ ಚರ್ಚಾ ಗೋಷ್ಠಿಯು "ಭಾರತದಲ್ಲಿ ನೈಸರ್ಗಿಕ ವಿಪತ್ತು ಮತ್ತು ಆರ್ಥಿಕ ಸ್ಥಿತಿ ಗತಿ" ಎಂಬ ವಿಷಯದ ಕುರಿತಾಗಿ ನಡೆಯುತ್ತದೆ. ಗೋಷ್ಠಿಯ ಚರ್ಚಾನಿರ್ವಾಹಕರಾಗಿ ಮೈಸೂರು ವಿಶ್ವವಿದ್ಯಾನಿಲಯದ ಭೂವಿಜ್ಞಾನ ಅಧ್ಯಯನ ವಿಭಾಗದ ನಿವೃತ್ತ ಪ್ರಾಧ್ಯಾಪಕರಾದ ಡಾ.ಮಹೇಶ್ ಬಿಲ್ವವರವರು ಭಾಗವಹಿಸುವರು. ತಂಡದ ಸದಸ್ಯರುಗಳಾಗಿ ಸರ್.ಎಂ.ವಿ.ಸ್ನಾತಕೋತ್ತರ ಕೇಂದ್ರದ ಅರ್ಥಶಾಸ್ತ್ರ ಅಧ್ಯಯನ ವಿಭಾಗದ ಪ್ರಾಧ್ಯಾಪಕರಾದ ಡಾ.ಜಿ.ಎಸ್.ಪ್ರೇಮ್‌ಕುಮಾರ್‌ರವರು, ಮಹಾರಾಣಿ ಮಹಿಳಾ ಕಲಾ ಕಾಲೇಜಿನ ಸ್ನಾತಕೋತ್ತರ ಭೂಗೋಳಶಾಸ್ತ್ರ ಅಧ್ಯಯನ ವಿಭಾಗದ ಪ್ರಾಧ್ಯಾಪಕರಾದ

**ಡಾ.ಹೇಮಚಂದ್ರ.ಪಿ.ಎನ್ ಅವರು ಮತ್ತು ಅಥೆನಾ ಎಜುಕೇಷನಲ್ ಸರ್ವೀಸಸ್‌ನ ಕಾರ್ಯನಿರ್ವಹಣಾಧಿಕಾರಿಗಳಾದ ಶ್ರೀ ಗಿರೀಶ್ ಬಾಗ ಅವರುಗಳು ಆಗಮಿಸುವರು.**

**ಅಂದು ಮಧ್ಯಾಹ್ನ ೩.೧೫ ರಿಂದ ೪.೩೦ ಗಂಟೆಗೆ ಆಯ್ದ ಪ್ರಬಂಧಗಳ ಮಂಡನೆ ಅಧಿವೇಶನ'ದಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಭೂಗೋಳಶಾಸ್ತ್ರ ಅಧ್ಯಯನ ವಿಭಾಗದ ಪ್ರಾಧ್ಯಾಪಕರಾದ ಡಾ.ಎಸ್.ಅರುಣ್‌ದಾಸ್‌ರವರು ಅಧ್ಯಕ್ಷರಾಗಿ ಭಾಗವಹಿಸುವರು. ಅರ್ಥಶಾಸ್ತ್ರ ಅಧ್ಯಯನ ವಿಭಾಗದ ಪ್ರಾಧ್ಯಾಪಕರಾದ ಡಾ.ನವಿತ ತಿಮ್ಮಯ್ಯ ಅವರು ಸಹ ಅಧ್ಯಕ್ಷರಾಗಿ ಪಾಲ್ಗೊಳ್ಳುವರು. ವಿಚಾರ ಸಂಕಿರಣದಿಂದ ಹೊರಹೊಮ್ಮಿದ ಮೌಲ್ಯಯುತ ಚರ್ಚೆಗಳನ್ನು ಸಮಗ್ರವಾಗಿ ಸಂಗ್ರಹಿಸಿ ಸಂಬಂಧಿಸಿದ ಇಲಾಖೆಗೆ ಕಳುಹಿಸಲಾಗುವುದು. ಕರ್ನಾಟಕದಾದ್ಯಂತ ಪದವಿ ಮತ್ತು ಸ್ನಾತಕೋತ್ತರ ಕಾಲೇಜುಗಳ ಪ್ರಾಧ್ಯಾಫಕರುಗಳು, ವಿದ್ಯಾರ್ಥಿಗಳು, ನೈರ್ಗಿಕ ತಜ್ಞರು ಮತ್ತು ಸಾಮಾಜಿಕ ಅಧಿಕಾರಿಗಳು ಈ ವಿಚಾರ ಸಂಕಿರಣದಲ್ಲಿ ಭಾಗವಹಿಸಬಹುದಾಗಿದೆ. ಹೆಚ್ಚಿನ ವಿವರಗಳಿಗೆ ಕಾಲೇಜು ಅಂತರ್ಜಾಲ ತಿತಿತಿ.ತಜಿಥಿ.ಟಿ ಹಾಗೂ ಡಾ.ಬಿ.ಎಸ್.ಶ್ರೀಹರ್ಷ, ಸಂಕಿರಣ ಕಾರ್ಯದರ್ಶಿ, ಮೊಬೈಲ್ ಸಂಖ್ಯೆ ೯೯೪೫೯೬೨೧೮ ಹಾಗೂ ಪ್ರೊ.ಮೋಹನ್‌ಕುಮಾರ್.ಎನ್, ಸಂಕಿರಣ ಸಂಯೋಜಕರು, ಮೊಬೈಲ್ ಸಂಖ್ಯೆ ೯೯೮೬೮೬೭೩೨೧ ರ'ವರನ್ನು ಸಂಪರ್ಕಿಸಲು ಕೋರಿದೆ.**